ಶ್ರೀ ಬಿ. ಬಸವಲಿಂಗಪ್ಪ.—ಇದು ಬಹಳ ಉಪಯುಕ್ತವಾದ ಸಲಹೆ ಆದರೆ ಯಾರುಯಾರು ಪಂಚಾಯಿತಿ ಮತ್ತು ಟೌನ್ ಪಂಚಾಯಿತಿಗಳಲ್ಲಿ ಈಗಾಗಲೇ ಇರುತ್ತಾರೆ ಅವರನ್ನೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಕಾನೂನು ಪ್ರಕಾರ ಒಂದು ಪ್ರಶ್ನೆ ಉದ್ಭವಿಸುತ್ತದೆ. ಅದು ಏನೆಂದರೆ ತಾಲ್ಲೋಕು ಬೋರ್ಡು, ಟೌನ್ ಪಂಚಾಯಿತಿಗಳಿಗೆ ಚುನಾಯಿತ ಅವಧಿ ಇದೆ. ಅಂಥ ಸಂದರ್ಭಗಳಲ್ಲಿ ಅವರನ್ನೇ ಮುಂದುವರಿಸಿಕೊಂಡು ಹೋಗಬೇಕೇ ಅಥವಾ ಅಡ್ಮಿನಿಸ್ಟ್ರೇಟರ ನೇಮಕಮಾಡಬಹುದೇ ಎಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಲಾ ಡಿಪಾರ್ಟ್‌ಮೆಂಟ್‌ನಿಂದ ಅಭಿಪ್ರಾಯ ಬಂದನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ.—ಸ್ವಾಮಿ ಈ ಪಂಚಾಯಿತಿ ಅವಧಿ ಮುಗಿದು ಹೋಗಿದೆ. ಟೌನ್ ಮುನಿಸಿಪಾಲಿಟಿಯಾಗಿ ಮಾಡಿದ್ದೀರಿ. ಪಂಚಾಯಿತಿ ಅವಧಿ ಮುಗಿದು ಹೋಗಿರುವುದರಿಂದ ಕ್ಷೇತ್ರ ವಿಂಗಡಣೆ ಮಾಡಿ ಚುನಾವಣೆ ಮಾಡುವುದಕ್ಕೆ ಮತ್ತು ಕೂಡಲೇ ಅಡಳಿತಾಧಿಕಾರಿಗಳನ್ನು ನೇಮಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿರಾ ?

ಶ್ರೀ ಬಿ. ಬಸವಲಿಂಗಪ್ಪ.—ಸಿದ್ದಾಪುರ ಟೌನ್ ಮುನಿಸಿಪಾಲಿಟಿಗೆ ಚುನಾವಣೆ ಮಾಡಲಿಕ್ಕೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುವಂತೆ ಡಿವಿಜನಲ್ ಕಮಿಷನರಿಗೆ ಆದೇಶ ಕೊಡುತ್ತೇನೆ. ಇನ್ನು ಮೂರು ತಿಂಗಳೊಳಗೆ ಚುನಾವಣೆ ಮಾಡವುದಕ್ಕೆ ಪ್ರಯತ್ನ ಮಾಡುತ್ತೇವೆ.

BRIDGE ACROSS HALLA NEAR BADA KEGUDLU

218. Sri T. TAREGOWDA (Kallambella).—

Will the Minister for Public Works and Electricity be pleased to state.—

(a) Whether the Government have sanctioned a bridge or a high level causeway across halla near Badake gudlu on Bellary Salakatte P.W.D. Road, C. N. Hally Taluk and Rs. 25,000 has been Provided in the budget of 1973-74;

(b) Whether the Minister for Public Works and Electricity promised that this work would be executed during 1973-74;

(c) Whether the Government has taken any steps for the execution of this work which is pending from a very long time ?

Sri. N. HUTCHAMASTHY GOWDA.— (Minister for

Revenue) [On behelf of Sri H. M. CHANNABASAPPA (Minister for Public Works and Electricity)].

(a) No. A provision of Rs. 20,000 has been made for this work in the budget estimate for 1973–74.

(b) Assurance was given that sanction would be accorded to the work.

(c) Plans and estimates for the work have been called for from the Chief engineer (C and B), Banglore for according approval.

ಶ್ರೀ ಟಿ. ತಾರೇಗೌಡ.— ನನ್ನ "ಆ" ಪ್ರಶ್ನೆಗೆ ಉತ್ತರವಾಗಿ ಹಿಂದೆ ಕಾಮಗಾರಿಗೆ ಮುಂಜೂರಾತಿಯನ್ನು ನೀಡಲಾಗುವುದೆಂದು ಭರವಸೆ ನೀಡಲಾಗಿದ್ದಿತು ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಬೆಳ್ಳಾರ ಮತ್ತು ಸಾಲಕಟ್ಟಿ ಹಳ್ಳಕ್ಕೆ ಸೇತುವೆ ಇಲ್ಲದಿರುವುದರಿಂದ ಸಿದ್ದನರಟ್ಟಿ ಜನಿವಾನುಗಳಿಗೆ ಗೊಬ್ಬರ ಮುಂತಾದ ವ್ಯವಸಾಯದ ಸಲಕರಣೆಗಳನ್ನು ಸಾಗಿಸಲು ತೊಂದರೆಯಾಗಿರುವುದರಿಂದ ಸರ್ಕಾರದವರು ಕೂಡಲೆ ನಕ್ಷೆ ಮತ್ತು ಅಂದಾಜು ಚೀಫ್ ಇಂಜನೀಯರರವರಿಂದ ಬಂದತಕ್ಷಣ ಮುಂಜೂರು ಮಾಡುತ್ತೀರಾ ಸ್ವಾಮಿ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.— ಪರಿಶೀಲನೆ ಆಗಿ ಬಂದಕೂಡಲೇ ಆದಷ್ಟು ಜಾಗೃತೆ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಬಿ ರಾಮಸ್ವಾಮಿ.— "ಸಿ" ಗೆ ಉತ್ತರವಾಗಿ ತಿಳಿಸಿದ್ದೀರಿ ಪ್ಲಾನ್ ಮತ್ತು ಎಸ್ಟಿಮೇಟಿಗೆ ಅಪ್ಪಣೆ ಕೊಟ್ಟಿದ್ದೀರಿ ಎಂದು. ಆದರೆ ಅವರು ಕೇಳಿರುವ ಪ್ರಶ್ನೆ ತುಂಬಾ ವರ್ಷಗಳಿಂದಲೇ ಕೆಲಸ ಪೆಂಡಿಂಗ್ ಆಗಿದೆ ಎಂದು. ಆದ್ದರಿಂದ ಈ ಕೆಲಸವನ್ನು ಎಷ್ಟು ವರ್ಷಗಳಲ್ಲಿ ಪೂರೈಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿ ಅಂದಾಜಾಗಿ ಆ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಬಡ್ಜೆಟ್ಟಿನಲ್ಲಿ ೨೦ ಸಾವಿರ ರೂಪಾಯಿ ಹಣ ಒದಗಿಸಲಾಗಿದೆ. ಇತ್ತೀಚೆಗೆ ೧ ಲಕ್ಷದ ೬೬ ಸಾವಿರದ ೫ ನೂರು ರೂಪಾಯಿ ಅಂದಾಜಾಗಿದೆ. ಅದನ್ನು ಪರಿಶೀಲನೆ ಮಾಡಿ ಚೀಫ್ ಇಂಜಿನಿಯರಿಗೆ ಕಳುಹಿಸಿಕೊಡುತ್ತೇವೆ. ಅದು ಬಂದ ಮೇಲೆ ಕೂಡಲೇ ಈ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ತಾರೇಗೌಡ.— ಕೊನೆಯ ಪಕ್ಷ ೧೯೭೪ ನೇ ಸಾಲಿನಲ್ಲಿ ಮುಂಜೂರು ಮಾಡುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ — ಭರವಸೆ ಕೊಡುತ್ತೇನೆ.